**<u>ಸಿ.ಸಿ. ಸಂ. 932/2022</u>**

## <u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ.</u>

**ಅಸಾ-*1* (ಚಾಸಾ-*1*)**

| | | |
|---|---|---|
| ಹೆಸರು | : | ಸುಮಿತ್ರಾ ತೇಗೂರ |
| ತಂದೆಯ / ಗಂಡನ ಹೆಸರು | : | ನಾಗಪ್ಪ |
| ವಯಸ್ಸು | : | 20 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಮಹಾಲಿಂಗಪೂರ |

<u>ದಿನಾಂಕ: 07-01-2023 ರಂದು ಸಾಕ್ಷಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ :</u> ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ 2 ರಿಂದ 8 ರವರ ಪರಿಚಯ ನನಗೆ ಇದೆ. ದಿಃ 23-10-2021 ರಂದು ಸಂಜೆ 4-45 ಗಂಟೆ ಸಮಾರಿಗೆ ನಾನು, ನನ್ನ 3 ತಿಂಗಳ ಕೂಸು, ನನ್ನ ಅಣ್ಣ ಮಹಾನಿಂಗ, ನನ್ನ ತಾಯಿ ಶಾಂತವ್ವ ಕೂಡಿಕೊಂಡು ನನ್ನ ತವರು ಧವಳೇಶ್ವರದಿಂದ ನನ್ನ ಗಂಡನ ಮನೆ ಪಾಲಭಾವಿಗೆ ನಮ್ಮ ಮೊಟಾರ್ ಸೈಕಲ ಮೇಲೆ ಬರುತ್ತಿದ್ದೆವು. ನಾವು ಕೆಸರಗೊಪ್ಪ ಹತ್ತಿರ ನಿಧಾನವಾಗಿ ಬರುತ್ತಿದ್ದಾಗ ಗೋಕಾಕದಿಂದ ಪ್ರವೀಣ ಎಂಬಾತ ತನ್ನ ಕಾರನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ನಿಧನವಾಗಿ ಚಲುಸುತ್ತಿದ್ದ ನಮ್ಮ ಮೊಟಾರ್ ಸೈಕಲಗೆ ಎದುರಿನಿಂದ ಹಾಯಿಸಿ ಅಪಘಾತ ಪಡಿಸಿದರು. ಅದರಿಂದ ನಾವೆಲ್ಲರೂ ಬಿದ್ದೆವು. ಸದರಿ ಅಪಘಾದಲ್ಲಿ ನನ್ನ ತಾಯಿಯ ಬಲಗಾಲಿನ ಮೇಲೆ ಕಾರು ಹಾಯಿದು ಗಾಯವಾಗಿರುತ್ತದೆ. ಮಹಾನಿಂಗ ಈತನ ಕೈಯಿಗೆ ತೆರಚಿದ ಗಾಯವಾಗಿರುತ್ತದೆ. ಅಲ್ಲಿ ಜನ ಕೂಡಿದ್ದು ಅವರು ನಮ್ಮನ್ನು ಕನಕರೆಡ್ಡಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಮಗೆ ಅಪಘಾತ ಪಡಿಸಿದ ಕಾರಿನ ನಂ. ಎಂ ಹೆಚ್ 31/ಡಿಕೆ 8837 ಇರುತ್ತದೆ. ಸದರಿ ಅಪಘಾತವು ಕಾರು ಚಾಲಕನ ತಪ್ಪಿನಿಂದ ಆಗಿರುತ್ತದೆ. ನಾವು ಆರೋಪಿತನ ಮೇಲೆ ದೂರು ಸಲ್ಲಿಸಿರುತ್ತೇವೆ.

ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1 ನೇ ಆರೋಪಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ನಾವು ಮಹಾಲಿಂಗಪೂರ ಕಡೆಯಿಂದ ಬರುತ್ತಿದ್ದು, ಕಾರು ಚಾಲಕ ಗೋಕಾಕ ಕಡೆಯಿಂದ ಬರುತ್ತಿದ್ದ ಎಂದರೆ ಸರಿ. ಮಹಾಲಿಂಗಪೂರ ಸರ್ಕಲನಲ್ಲಿ ಎರಡೂ ಬದಿಗಳಲ್ಲಿ ವಾಹನ ಓಡಾಡುತ್ತವೆ. ರಸ್ತೆಯ ಮದ್ಯೆ ಡಿವೈಡರ್ ಇದೆ. ಸದರಿ ರಸ್ತೆ ದೊಡ್ಡದಿದೆ ಎಂದರೆ ಸರಿ. ಕೆಸರಕೊಪ್ಪರಸ್ತೆಯಲ್ಲಿ ಸಾಕಷ್ಟು ಅಂಗಡಿಗಳು ಇದ್ದು, ಅಲ್ಲಿ ಸಾಕಷ್ಟು ಜನಸಂದಣಿ ಇದೆ ಎಂದರೆ ಸರಿ. ಅಲ್ಲಿ ಚೆಕ್ ಪೋಸ್ಟ ಇದೆ ಎಂದರೆ ಸರಿ. ಅಲ್ಲಿ ಚೆಕ್ ಪೊಸ್ಟ ಇರುವುದರಿಂದ ಯಾವುದೇ ಮೋಟಾರ್ ವಾಹನಗಳು ತುಂಬಾ ಜೊರಾಗಿ ಹೋಗಲು ಆಗುವುದಿಲ್ಲ ಎಂದರೆ ಸರಿ. ನಾವು ಮಹಲಿಂಗಪೂರದಿಂದ ಕೆಸರಕೊಪ್ಪ ಕಡೆಗೆ ಹೋಗಲು ಎಡಗಡೆಯಿಂದ ಬಲಗಡೆ ತಿರುಗಿಕೊಂಡೆವು ಎಂದರೆ ಸರಿ. ಆಗ ಬರುತ್ತಿದ್ದ ಕಾರಿಗೆ ನಮ್ಮ ಗಾಡಿ ಹಾಯಿಸಿ ಅಪಘಾತಪಡಿಸಿಕೊಂಡೆವು ಎಂದರೆ ಸರಿಯಲ್ಲ. ನಮ್ಮ ಮೊಟಾರ್ ಸೈಕಲನಲ್ಲಿ ನಾವು 3 ಮಂದಿ ಹೊರಟಿದ್ದೆವು ಎಂದರೆ ಸರಿ. ಸದರಿ ಅಪಘಾತ ನಮ್ಮ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ. ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .

**<u>ಸಿ.ಸಿ. ಸಂ. 932/2022</u>**